

# ನಕಲಿ ಸತ್ಯದ ವ್ಯರ್ಥ ಪ್ರಯತ್ನ

**ತಾಂತ್ರಿಕ ಕಟ್ಟುಮಸ್ತುತನದಿಂದ ಗಮನಸೆಳೆಯುವ 'ಆವರ್ತ', ಕಥನಕ್ರಿಯೆಯಲ್ಲಿ ಅನುಭವವೇದ್ಯಗೊಳ್ಳದೆ ಕೃತಕವೆನಿಸುತ್ತದೆ.**

**■ ಗೌರಿ**

ಸತ್ಯ ಸಂಕೀರ್ಣವಾದದ್ದು. ಅದನ್ನು ಅರಿಯುವ ಹಾದಿ ಕಠಿಣವಾದದ್ದು. ಹಾಗಾಗಿಯೇ ಬಹಳ ಸಲ 'ಸಿದ್ಧ ಸತ್ಯ'ದ ಸರಳ ಮೋಹಕ ಮಾದರಿಗಳಿಗೇ ನಾವು ಆತುಕೊಳ್ಳುತ್ತಿರುತ್ತೇವೆ. ಯಾರೋ ಹೇಳಿದ, ನಮ್ಮ ಅನುಭವಕ್ಕೆ ನಿಲುಕದ ಸುಂದರವಾದ ಮಾತುಗಳನ್ನು ಮತ್ತೆ ಮತ್ತೆ ಪಠಿಸುತ್ತಿರುತ್ತೇವೆ. ಇವು ಬದುಕಿಗಷ್ಟೇ ಅಲ್ಲ, ಕೃತಿಸೃಷ್ಟಿಯಲ್ಲೂ ಅನ್ವಯಿಸುತ್ತವೆ. ಸೃಜನಶೀಲ ಕಲಾವಿದ ಯಾವಾಗಲೂ ಸಂಕೀರ್ಣವಾಗಿರುವ ಸತ್ಯಕ್ಕೆ ತನ್ನ ಕೃತಿಗಳ ಮೂಲಕ ನೇರ ಮುಖಾಮುಖಿಯಾಗಲು ಹೆಣಗುತ್ತಿರುತ್ತಾನೆ. ಅದೊಂದು ಬಗೆಯ ಅಗ್ನಿದಿವ್ಯ. ಸುಟ್ಟುಕೊಳ್ಳುತ್ತಲೇ ಹುಟ್ಟುವ ಪ್ರಕ್ರಿಯೆ. ಆದರೆ ಮೀಡಿಯೊಕರ್‌ಗಳು ಯಾರೋ ಕೊಟ್ಟು ಹೋದ 'ಸಿದ್ಧ ಸತ್ಯ'ಗಳ ಹಳಸಲು ಮಾದರಿಗಳಿಗೇ ಮೈಯುಜ್ಜುತ್ತ, ಮತ್ತಷ್ಟು ಮೋಹಕವಾಗಿ ಹೇಳುತ್ತ ಜನರನ್ನು ಮೈಮರೆಸಲು ಯತ್ನಿಸುತ್ತಿರುತ್ತಾರೆ. ಹೀಗೆ ಅನುಭವಕ್ಕೆ ಮುಖಾಮುಖಿಯಾಗದೇ ಕಟ್ಟುವ ಕೃತಿಗಳು ಯಾವಾಗಲೂ 'ನಕಲಿ ಸತ್ಯ'ಗಳನ್ನು ನಿಜವೆಂಬಂತೆ ಕಾಣಿಸುತ್ತಿರುತ್ತವೆ.

ಗಣೇಶ ಹೆಗಡೆ ಅವರ ಕಿರುಚಿತ್ರ 'ಆವರ್ತ' ಕೂಡ ಹೀಗೆ ಒಂದು ನಕಲಿ ದರ್ಶನಕ್ಕೆ ಮೈಯುಜ್ಜುತ್ತ ಆನಂದ ಪಡೆಯವ ಮೀಡಿಯೊಕರ್ ಪ್ರಯತ್ನವಾಗಿಯೇ ಕಾಣುತ್ತದೆ.

ಭೂಗತಲೋಕದ ಡಾನ್ ಒಬ್ಬ ಹದಿನೈದು ವರ್ಷಗಳಿಂದ ಅಜ್ಞಾತನಾಗಿದ್ದಾನೆ. ಅವನು ಎಲ್ಲಿದ್ದಾನೆ ಎಂಬ ಸುಳಿವು ಆಂಟನಿ ಎಂಬ ಇನ್ನೊಬ್ಬ ಯುವ ರೌಡಿಗೆ ಸಿಗುತ್ತದೆ. ಅವನು ಇಮ್ರಾನ್ ಎಂಬ ಸಹಚರನೊಟ್ಟಿಗೆ ಬಂದು ಆ ಡಾನ್‌ನನ್ನು ಕೊಲ್ಲುತ್ತಾನೆ. ಕೊಲೆಯಾಗುವಾಗ ಆ ಡಾನ್ ಹೇಳುವ ಭಗವದ್ಗೀತೆಯ ಸಾಲುಗಳಿಂದ ಆಂಟನಿಗೆ ಮನಃಪರಿವರ್ತನೆ ಆಗುತ್ತದೆ. ಇದು ಕಿರುಚಿತ್ರದ ಕಥೆಯ ಎಳೆ.



**ಚಿತ್ರ:** ಆವರ್ತ (ಕನ್ನಡ)
**ನಿರ್ದೇಶಕ:** ಗಣೇಶ ಹೆಗಡೆ
**ನಿರ್ಮಾಣ:** ಸುಮಂತ್ ಶೆಟ್ಟಿ, ವಿನಯ್ ಶೆಟ್ಟಿ, ಅಮಿತ್ ಪಾಂಡೆ
**ಛಾಯಾಗ್ರಹಣ:** ಅರ್ಜುನ್ ಶೆಟ್ಟಿ
**ಸಂಗೀತ:** ಗಗನ್ ಬಡಾರಿಯಾ
**ಸಂಭಾಷಣೆ:** ನರೇಶ್ ಹೆಗಡೆ ದೊಡ್ಮನೆ, ನರೇಶ್ ಭಟ್, ಗಣೇಶ ಹೆಗಡೆ
**ಸಂಕಲನ:** ಸುಮಂತ್ ಸುರೇಶ್
**ತಾರಾಗಣ:** ತಾರಕ್ ಪೊನ್ನಪ್ಪ, ವಿನಯ್ ಕೃಷ್ಣಸ್ವಾಮಿ, ನರೇಶ್ ಭಟ್

'ಅಂತಸ್ತು, ಅಧಿಕಾರ ಇದ್ಯಾವುದೂ ಶಾಶ್ವತ ಅಲ್ಲ, ಕರ್ಮ ಅನ್ನುವುದು ಮಾತ್ರ ಶಾಶ್ವತ.' ಇದನ್ನು ಹೇಳುವುದು ಕಿರುಚಿತ್ರದ ಉದ್ದೇಶ. ಈ ಒಂದು ಸಂದೇಶವನ್ನು ಹೇಳುವ ಸಲುವಾಗಿಯೇ ಹೆಣೆದಿರುವ ಸನ್ನಿವೇಶಗಳು ತೀರಾ ಕೃತಕವಾಗಿ ಕಾಣಿಸುತ್ತವೆ. ಸನ್ನಿವೇಶಗಳಿಂದ ಸಹಜವಾಗಿ ದರ್ಶನ ಹುಟ್ಟುವುದಕ್ಕೂ, ದರ್ಶನ ಮಾಡಿಸುವುದಕ್ಕಾಗಿಯೇ ಸನ್ನಿವೇಶಗಳನ್ನು ಕಟ್ಟುವ ತಿಪ್ಪರಲಾಗಕ್ಕೂ ಸಾಕಷ್ಟು ವ್ಯತ್ಯಾಸವಿದೆ. ಆ ವ್ಯತ್ಯಾಸದಲ್ಲಿಯೇ ಈ ಕಿರುಚಿತ್ರದ ಜೊಳ್ಳುತನದ ಮೂಲವಿದೆ.

ಇಲ್ಲಿನ ಮೂರು ಪಾತ್ರಗಳಿಗೆ ನಿರ್ದೇಶಕರು ಉದ್ದೇಶಪೂರ್ವಕವಾಗಿ ಮೂರು ಧರ್ಮಗಳನ್ನು ಸೂಚಿಸುವ ಹೆಸರು ಇಟ್ಟಿದ್ದಾರೆ. ಆ ಧರ್ಮದ ಚಿಹ್ನೆಗಳನ್ನೂ ಚಿತ್ರಗಳಲ್ಲಿ ಬಳಸಿಕೊಂಡಿದ್ದಾರೆ. ಮೇಲ್ನೋಟಕ್ಕೆ ಸರ್ವಧರ್ಮ ಸಾರತತ್ವವನ್ನು ಹೇಳಹೊರಟಂತೆ ಕಾಣುವ ಈ ಚಿಹ್ನೆಗಳು ಅದರ ಹಿಂದೆ ಬಹುಸೂಕ್ಷ್ಮವಾಗಿ 'ಧರ್ಮ ರಾಜಕಾರಣ'ದ ವಾಸನೆಯನ್ನೂ ಹೊಂದಿವೆ. ಪಾತ್ರಗಳ ಪೋಷಣೆ, ಕಥನದ ಕ್ಯಾನ್ವಾಸಿನಲ್ಲಿ ಅವುಗಳು ನಿಲ್ಲುವ 'ಜಾಗ'ಗಳೇ ಇದನ್ನು ಸೂಚಿಸುತ್ತವೆ. ಸಮಕಾಲೀನ ಸಮಾಜದ ಪರಿಸ್ಥಿತಿಯ ಅರಿವಿರುವ ನಿರ್ದೇಶಕ ಇಂಥ 'ರಾಜಕಾರಣ'ವನ್ನು ತನ್ನ ಕೃತಿಯಲ್ಲಿ ಪ್ರಜ್ಞಾಪೂರ್ವಕವಾಗಿ ನಿರಾಕರಿಸದೇ ಹೋದರೆ ಅದನ್ನು ಸಂವೇದನಾಹೀನತೆ ಅನ್ನದೇ ವಿಧಿಯಿಲ್ಲ.

ಕಥನದಲ್ಲಿ ಇಷ್ಟು ಜೊಳ್ಳಾಗಿದ್ದರೂ 'ಆವರ್ತ' ಗಮನಸೆಳೆಯುವುದು ತನ್ನ ತಾಂತ್ರಿಕ ಮೈಕಟ್ಟಿನಿಂದ. ಸಂಗೀತ, ಸಂಕಲನ, ಬೆಳಕಿನ ವಿನ್ಯಾಸ, ಛಾಯಾಗ್ರಹಣಗಳು ಕಿರುಚಿತ್ರದ ಹೂರಣದ ದೋಷಗಳನ್ನು ಮರೆಸಿ ನೋಡುಗನನ್ನು ಸೆಳೆದು ಹಿಡಿಯುವಷ್ಟು ಶಕ್ತವಾಗಿದೆ. ಆದರೆ ಈ ತಾಂತ್ರಿಕ ಪರಿಕರಗಳೂ 'ಮೋಹಕವಾಗಿ ಕಾಣಿಸುವ' ನಿಟ್ಟಿನಲ್ಲಿಯೇ ಶ್ರಮಿಸುವುದರಿಂದ ಅದು ಕಟ್ಟಿಕೊಡುವ ಅನುಭವ ಕಥನದಿಂದ ಬೇರ್ಪಟ್ಟು ಸ್ವತಂತ್ರವಾಗಿ ನಿಲ್ಲುತ್ತದೆ.

ಸಿನಿಮಾ ಮಾಧ್ಯಮದ ತಾಂತ್ರಿಕ ಸಾಧ್ಯತೆಗಳ ಕುರಿತು ನಿರ್ದೇಶಕರಿಗೆ ಅರಿವು ಮತ್ತು ಆಸಕ್ತಿ ಎರಡೂ ಇರುವುದಕ್ಕೆ ಈ ಚಿತ್ರದಲ್ಲಿ ಸಾಕಷ್ಟು ಪುರಾವೆಗಳಿವೆ. ಅವರು ಅದರ ತಾತ್ವಿಕ ಸಾಧ್ಯತೆಗಳ ಕುರಿತು ಇನ್ನಷ್ಟು ಆಳವಾಗಿ, ದಿಟ್ಟವಾಗಿ ಅರಿತುಕೊಳ್ಳಲು ಸಾಧ್ಯವಾದರೆ ಬದುಕಿನ ಸಂಕೀರ್ಣ ಸತ್ಯಗಳನ್ನು ದಿಟ್ಟವಾಗಿ ಕಾಣಿಸುವಲ್ಲಿ ಮುಂದಿನ ಪ್ರಯತ್ನಗಳಲ್ಲಿ ಯಶಸ್ವಿಯಾಗಬಹುದು.

ಈ ಕಿರುಚಿತ್ರ ವೀಕ್ಷಣೆಗೆ **bit.ly/2YfIXAp** ಕೊಂಡಿ/ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.